**<u>ಸಾಕ್ಷಿಯನ್ನು ದಿನಾಂಕ 23-01-2024 ರಂದು ಪುನಃ ಕರೆಯಿಸಿ ತೆಲುಗು ಮತ್ತು ಕನ್ನಡ ಎರಡೂ ಭಾಷೆಯನ್ನು ಮಾತನಾಡುವ ಮತ್ತು ನ್ಯಾಯಾಲಯದಲ್ಲಿ ಹಾಜರಿರುವ ಶ್ರೀಮತಿ ನಾಗವೇಣಿ ಎಸ್. ಕಳಸ್ಕರ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಕ ಮಾಡಿಕೊಂಡು ಸಾಕ್ಷಿಗೆ ತೆಲುಗಿನಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಮ್.ಎಸ್.ಎಸ್. ವಕೀಲರಿಂದಃ</u>**

ನನ್ನ ಗಂಡನಿಗೆ 4 ನೇ ಆರೋಪಿ ರಾಜು ಮತ್ತು 5 ನೇ ಆರೋಪಿ ಯವನ್ ಎಂಬ ಇಬ್ಬರು ಸಹೋದರರು. ನನ್ನ ಗಂಡನ ಇಬ್ಬರು ಸಹೋದರರಿಗೆ ಮದುವೆ ಆಗಿ ಮಕ್ಕಳಿದ್ದಾರೆ ಎಂದರೆ ಸರಿ. ಸದರಿಯವರಿಬ್ಬರು ತಮ್ಮ-ತಮ್ಮ ಹೆಂಡತಿ ಮಕ್ಕಳೊಂದಿಗೆ ಅನೊನ್ಯವಾಗಿ ವಾಸವಿದ್ದಾರೆ ಎಂದರೆ ಸರಿ. 4 ನೇ ಆರೋಪಿ ತನ್ನ ಹೆಂಡತಿ ಮಕ್ಕಳೊಂದಿಗೆ ಎಲ್ಲಿ ವಾಸವಿದ್ದಾನೆ ಎಂಬ ಪ್ರಶ್ನೆಗೆ ಸಾಕ್ಷಿ ಮನ್ನಾಪೂರದಲ್ಲಿ ವಾಸವಿದ್ದಾನೆ ಎನ್ನುತ್ತಾರೆ. 4 ನೇ ಆರೋಪಿ ತನ್ನ ಹೆಂಡತಿ-ಮಕ್ಕಳೊಂದಿಗೆ ಜಹೀರಾಬಾನಲ್ಲಿ ವಾಸವಿದ್ದು ಅಲ್ಲೇ ಕೆಲಸ ಮಾಡಿಕೊಂಡಿದ್ದಾನೆ ಮತ್ತು ಆತನಿಗೆ ಸಂಬಂಧಪಟ್ಟ ಆಧಾರ ಕಾರ್ಡ ಮತ್ತಿತರ ದಾಖಲೆಗಳು ಜಹೀರಾಬಾದ ವಿಳಾಸದಲ್ಲಿ ಇದೆ ಎನ್ನುವುದು ಸರಿಯಲ್ಲ.

ಮನ್ನಾಪೂರ ಗ್ರಾಮದಲ್ಲಿ ನನ್ನ ಮಾವ 2 ನೇ ಆರೋಪಿಗೆ ಸೇರಿದ 3 ಮನೆ ಇದೆ ಎಂದರೆ ಸರಿ. ಸದರಿ ಮೂರು ಮನೆಗಳ ಪೈಕಿ ಒಂದರಲ್ಲಿ ನನ್ನ ಅತ್ತೆ-ಮಾವ ಆದ 2 ಮತ್ತು 3 ನೇ ಆರೋಪಿತರು, ಇನ್ನೊಂದು ಮನೆಯಲ್ಲಿ 5 ಮತ್ತು 6 ನೇ ಆರೋಪಿತರು ಹಾಗೂ ಮತ್ತೊಂದು ಮನೆಯಲ್ಲಿ ನನ್ನ ಗಂಡ ಮತ್ತು ನಾನು ವಾಸವಿದ್ದೆವು ಎಂದರೆ ಸರಿ. 1, 4 ಮತ್ತು 5 ನೇ ಆರೋಪಿತರು ಅವರ ತಂದೆ-ತಾಯಿಯಿಂದ ಎಷ್ಟು ವರ್ಷಗಳಿಂದ ಬೇರೆಯಾಗಿ ವಾಸವಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ 4 ನೇ ಆರೋಪಿ ನನ್ನ ಮದುವೆಯಾಗುವುದಕ್ಕೂ ಮೊದಲೇ ಬೇರೆಯಾಗಿದ್ದಾನೆ ಮತ್ತು 5 ನೇ ಆರೋಪಿ ಆತನ ತಂದೆ-ತಾಯಿ ಜೊತೆ ಇದ್ದಾನೆ ಎನ್ನುತ್ತಾರೆ. ನನ್ನ ಮದುವೆಯಾಗುವುದಕ್ಕೂ ಮೊದಲೇ 1, 4 ಮತ್ತು 5 ನೇ ಆರೋಪಿತರು ಅವರ ತಂದೆ-ತಾಯಿಯಿಂದ ಬೇರೆಯಾಗಿ ನನ್ನ ಮಾವನ ಮೂರು ಮನೆಗಳಲ್ಲಿ ಪ್ರತ್ಯೇಕವಾಗಿ ವಾಸವಿದ್ದರು ಸಹ 5 ನೇ ಆರೋಪಿ ಆತನ ತಂದೆ-ತಾಯಿ ಜೊತೆ ಇದ್ದಾನೆ ಎಂದು ಸುಳ್ಳು ಹೇಳುತ್ತಿದೇನೆ ಎನ್ನುವುದು ಸರಿಯಲ್ಲ. 1 ರಿಂದ 6 ನೇ ಆರೋಪಿತರಿಗೆ ಸಂಬಂಧಪಟ್ಟ ಆಧಾರ ಕಾರ್ಡ ಮತ್ತಿತರ ಸರ್ಕಾರಿ ದಾಖಲೆಗಳಲ್ಲಿ ಅವರ ವಿಳಾಸ ಬೇರೆ-ಬೇರೆ ಇದೆ ಎನ್ನುವುದು ಸರಿ.

ನೀವು ಎಷ್ಟು ವರ್ಷದಿಂದ ನಿಮ್ಮ ತಂದೆ ಮನೆಯಲ್ಲಿ ವಾಸವಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಕಳೆದ 6

ವರ್ಷಗಳಿಂದ ಇದ್ದೇನೆ ಎನ್ನುತ್ತಾರೆ. ನನ್ನ ಚಿಕ್ಕ ಮಗನಿಗೆ ಈಗ 7 ವರ್ಷ ವಯಸ್ಸಾಗಿದೆ ಮತ್ತು ದೊಡ್ಡವನಿಗೆ 15 ವರ್ಷ ವಯಸ್ಸಾಗಿದೆ. ನನ್ನ ಹಿರಿಯ ಮಗ ಬಬ್ಲು ಕಳೆದ 3 ವರ್ಷಗಳಿಂದ ತೆಲಂಗಾಣ ರಾಜ್ಯದ ತೋರಮಣಿ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡುತ್ತಾನೆ. 3 ವರ್ಷಗಳ ಹಿಂದೆ ಬಬ್ಲು ಎಲ್ಲಿದ್ದ ಎಂಬ ಪ್ರಶ್ನೆಗೆ ಸಾಕ್ಷಿ 1 ನೇ ಆರೋಪಿ ಜೊತೆ ಇದ್ದ ಎನ್ನುತ್ತಾರೆ. ನನ್ನ ಮಗ 5 ನೇ ತರಗತಿವರೆಗೆ ಆರೋಪಿತರ ಬಳಿಯೇ ಇದ್ದು ವಿದ್ಯಾಭ್ಯಾಸ ಮಾಡಿದ್ದಾನೆ ಎಂದು ಸೂಚಿಸಿದರೆ ಸಾಕ್ಷಿ ಆರೋಪಿತರು ನನ್ನ ಮಗನನ್ನು ನನ್ನ ಬಳಿ ಕಳುಹಿಸಲಿಲ್ಲ ಮತ್ತು ಕಳುಹಿಸುವಂತೆ ಕೇಳಿದ್ದಕ್ಕೆ ನನಗೆ ಹೊಡೆದಿದ್ದಾರೆ ಎನ್ನುತ್ತಾರೆ. ನಾನು ನನ್ನ ಮಗನನ್ನು ಶಾಲೆ ಬಿಡಿಸಿ ಈಗ ದನ ಮೆಯಿಸಲು ಕಳುಹಿಸುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ನನ್ನ ಮಗ ಈಗ 7 ನೇ ತರಗತಿವರೆಗೆ ಓದುತ್ತಿದ್ದಾನೆ ಎನ್ನುತ್ತಾರೆ.

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-3 ರಿಂದ 8 ರವರೆಲ್ಲರು ನನ್ನ ಹತ್ತಿರದ ಸಂಬಂಧಿಕರು ಎಂದು ಸೂಚಿಸಿದರೆ ಸಾಕ್ಷಿ ಚಾಸಾ-3 ನನ್ನ ತಮ್ಮ, ಚಾಸಾ-4 ನನ್ನ ತಂದೆ ಮತ್ತು ಇತರೇ ಸಾಕ್ಷಿದಾರರು ನಮ್ಮ ಊರಿನವರು ಎನ್ನುತ್ತಾರೆ.

ನಿಮ್ಮ ಮದುವೆಯಾದ 6 ತಿಂಗಳ ನಂತರ ಆರೋಪಿತರು ನಿಮಗೆ ಕಿರುಕುಳ ಕೊಟ್ಟಿದ್ದರು ಎಂದು ನೀವು ಪೊಲೀಸರಿಗೆ ಏನಾದರೂ ದೂರು ಕೊಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಕುಂಚಾವರಂ ಪೊಲೀಸರಿಗೆ ದೂರು ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ ದೂರು ಏನಾಯಿತು ಎಂಬ ಪ್ರಶ್ನೆಗೆ ಸಾಕ್ಷಿ ದೂರು ಕೊಟ್ಟ ನಂತರ ನನ್ನ ಗಂಡ 1 ನೇ ಆರೋಪಿ ನನ್ನ ಬಳಿ ಬಂದು ರಾಜಿ ಮಾಡಿಕೊಂಡ ಎನ್ನುತ್ತಾರೆ. ನೀವು ಈ ಪ್ರಕರಣದಲ್ಲಿ ದೂರು ದಾಖಲಿಸಿದ ನಂತರ 1 ನೇ ಆರೋಪಿ ನಿಮ್ಮ ಜೊತೆ ಎಷ್ಟು ದಿನ ಇದ್ದ ಎಂಬ ಪ್ರಶ್ನೆಗೆ ಸಾಕ್ಷಿ 2 ತಿಂಗಳು ಇದ್ದ ಎನ್ನುತ್ತಾರೆ.

ನನ್ನನ್ನು ಮದುವೆಯಾಗುವುದಕ್ಕೂ ಮೊದಲೆ 1 ನೇ ಆರೋಪಿಗೆ ಕುಡಿತದ ಚಟ ಇತ್ತು ಎಂದು ಸೂಚಿಸಿದರೆ ಸಾಕ್ಷಿ ಸದರಿ ವಿಚಾರ ನನಗೆ ಮದುವೆಯಾದ ನಂತರ ಗೊತ್ತಾಯಿತು ಎನ್ನುತ್ತಾರೆ. ನಾನು ಮತ್ತು ನನ್ನ ಗಂಡ ಇಬ್ಬರು ಅನ್ಯೋನ್ಯವಾಗಿ ಇದ್ದಿದ್ದರಿಂದ ನಮಗೆ ಇಬ್ಬರು ಮಕ್ಕಳಿದ್ದಾರೆಂದು ಸೂಚಿಸಿದರೆ ಸಾಕ್ಷಿ ನನ್ನ ಗಂಡ ನನಗೆ ಕಿರುಕುಳ ಕೊಟ್ಟಿದ್ದಾನೆ ಎನ್ನುತ್ತಾರೆ.

ದಿನಾಂಕ 28-01-2021 ರಂದು ಆರೋಪಿತರು ಎಷ್ಟು ಗಂಟೆಗೆ ನಿಮ್ಮ ಮನೆಗೆ ಬಂದಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ರಾತ್ರಿ 08-00 ಗಂಟೆಗೆ ಬಂದಿದ್ದರು ಎನ್ನುತ್ತಾರೆ. ಸದರಿ ದಿನ ಆರೋಪಿತರು

ಎಷ್ಟು ತಾಸು ನಿಮ್ಮ ಮನೆ ಬಳಿ ಇದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಎರಡು ತಾಸು ಇದ್ದರು ಎನ್ನುತ್ತಾರೆ. ಆರೋಪಿತರು ನಿಮ್ಮ ಮನೆಗೆ ಹೇಗೆ ಬಂದಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಆಟೋದಲ್ಲಿ ಬಂದಿದ್ದರು ಎನ್ನುತ್ತಾರೆ. ಸದರಿ ಆಟೋವನ್ನು ನಾನು ನೋಡಿದ್ದೇನೆ. ಸದರಿ ಆಟೋ ನಂಬರನ್ನು ನಾನು ನೋಡಿಲ್ಲ. ಸದರಿ ಆಟೋ ಯಾರದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಆಟೋವನ್ನು ಯಾರು ಚಲಾಯಿಸುತ್ತಿದ್ದರು ಎಂದು ನಾನು ನೋಡಿಲ್ಲ. ನಿಮ್ಮ ಮತ್ತು ಆರೋಪಿತರ ನಡುವೆ ಎಷ್ಟು ಸಮಯ ಗಲಾಟೆ ಆಯಿತು ಎಂಬ ಪ್ರಶ್ನೆಗೆ ಸಾಕ್ಷಿ ಒಂದು ತಾಸು ಆಯಿತು ಎನ್ನುತ್ತಾರೆ. ಆಗ ಜೋರಾಗಿ ವಾಗ್ವಾದ ಆಗಿತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ತುಂಬಾ ಜೋರಾಗಿ ಆಗಿತ್ತು ಎನ್ನುತ್ತಾರೆ. ಆಗ ಅಕ್ಕ-ಪಕ್ಕದ ಮನೆಯವರು ಘಟನಾ ಸ್ಥಳದಲ್ಲಿ ಜಮಾಯಿಸಿದ್ದರೆ ಎಂಬ ಪ್ರಶ್ನೆಗೆ ಸಾಕ್ಷಿ ಸಾಕಷ್ಟು ಜನ ಜಮಾಯಿಸಿದ್ದರು ಎನ್ನುತ್ತಾರೆ. ಘಟನಾ ಸ್ಥಳದಲ್ಲಿ ಸಾಕಷ್ಟು ಜನ ಜಮಾಯಿಸಿದ್ದರು ಎಂದು ನಾನು ಪೊಲೀಸರಿಗೆ ಹೇಳಿದ್ದೇನೆ.

ಘಟನೆಯಲ್ಲಿ ನಿಮಗೇನಾದರೂ ರಕ್ತಗಾಯ ಆಯಿತೆ ಎಂಬ ಪ್ರಶ್ನೆಗೆ ಸಾಕ್ಷಿ ಆದರೆ ಹೊಟ್ಟೆಗೆ ಒಳ ಏಟು ಬಿತ್ತು ಎನ್ನುತ್ತಾರೆ. ಸದರಿ ಗಾಯಕ್ಕೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಯಾವತ್ತು ಚಿಕಿತ್ಸೆ ಪಡೆದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಘಟನೆ ನಡೆದ ದಿನವೇ ರಾತ್ರಿ 10-00 ಗಂಟೆಗೆ ಚಿಕಿತ್ಸೆ ಪಡೆದಿದ್ದೆ ಎನ್ನುತ್ತಾರೆ. ಎಲ್ಲಿ ಚಿಕಿತ್ಸೆ ಪಡೆದಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಕುಂಚಾವರಂ ಆಸ್ಪತ್ರೆಯಲ್ಲಿ ಪಡೆದಿದ್ದೆ ಎನ್ನುತ್ತಾರೆ. ವೈದ್ಯರ ಬಳಿ ನಿಮಗೆ ಗಾಯ ಹೇಗಾಯಿತು ಎಂದು ಹೇಳಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಹೇಳಿದ್ದೇನೆ ಎನ್ನುತ್ತಾರೆ.

ನಿಪಿ-2 ರ ದೂರು ಕೊಡಲು ಠಾಣೆಗೆ ಯಾರ್ಯಾರು ಹೋಗಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ನಾನು, ನನ್ನ ತಂದೆ ಚಾಸಾ-4 ಮತ್ತು ನಮ್ಮ ಗ್ರಾಮಸ್ಥ ಚಾಸಾ-6 ಶೇಖರ ಹೋಗಿದ್ದೆವು ಎನ್ನುತ್ತಾರೆ. ಘಟನೆ ನಡೆದ ಎಷ್ಟು ದಿನಗಳ ನಂತರ ದೂರು ಕೊಟ್ಟಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಘಟನೆ ನಡೆದ ದಿನ ನಾನು ಆಸ್ಪತ್ರೆಗೆ ಹೋದೆ ನಂತರ ಮರುದಿನ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟೆ ಎನ್ನುತ್ತಾರೆ. ನಿಪಿ-2 ರ ದೂರನ್ನು ಎಲ್ಲಿ, ಯಾರ ಬಳಿ ಟೈಪ್ ಮಾಡಿಸಲಾಯಿತು ಎಂಬ ಪ್ರಶ್ನೆಗೆ ಸಾಕ್ಷಿ ಪೊಲೀಸ್ ಠಾಣೆಯಲ್ಲಿ ಪೊಲೀಸರೇ ಟೈಪ್ ಮಾಡಿದರು ಎನ್ನುತ್ತಾರೆ. ನೀವು ಹೇಳಿದಂತೆ ಪೊಲೀಸರು ಸದರಿ ದೂರನ್ನು ಟೈಪ್ ಮಾಡಿದರೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎನ್ನುತ್ತಾರೆ.

ಆರೋಪಿತರು ನಿಮ್ಮ ಅಕ್ಕನ ಮೇಲೆ ಯಾವಾಗ ಹಲ್ಲೆ ಮಾಡಿದರು ಎಂಬ ಪ್ರಶ್ನೆಗೆ ಸಾಕ್ಷಿ ನಾನು

ಈ ಪ್ರಕರಣದಲ್ಲಿ ದೂರು ದಾಖಲಿಸುವ ಮೊದಲು ಮತ್ತು ನಾನು ನನ್ನ ತವರು ಮನೆಗೆ ಹೋದ ಒಂದು ವರ್ಷಗಳ ನಂತರ ಶಿವರೆಡ್ಡಿಪಲ್ಲಿಗೆ ಬಂದಿದ್ದ ಆರೋಪಿತರು ಅಲ್ಲಿ ನನ್ನ ಅಕ್ಕನ ಮೇಲೆ ಹೊಲದಲ್ಲಿ ಹಲ್ಲೆ ಮಾಡಿದರು ಎನ್ನುತ್ತಾರೆ. ಸದರಿ ಘಟನೆ ಬಗ್ಗೆ ನಿಮ್ಮ ಅಕ್ಕ ಆರೋಪಿತರ ವಿರುದ್ಧ ದೂರು ಕೊಟ್ಟಿದ್ದಿರಾಯೇ ಎಂಬ ಪ್ರಶ್ನೆಗೆ ಸಾಕ್ಷಿ ಕೊಟ್ಟಿದ್ದಾಳೆ ಎನ್ನುತ್ತಾರೆ. ಆ ಬಗ್ಗೆ ನನ್ನ ಬಳಿ ದಾಖಲೆ ಇದೆ.

2 ರಿಂದ 6 ನೇ ಆರೋಪಿತರು ನನ್ನ ಮತ್ತು 1 ನೇ ಆರೋಪಿ ಸಂಸಾರದಲ್ಲಿ ಯಾವತ್ತು ತಲೆ ಹಾಕಿಲ್ಲ ಮತ್ತು ಅವರು ತಮ್ಮ-ತಮ್ಮ ಸಂಸಾರವನ್ನು ನೋಡಿಕೊಂಡು ಪ್ರತ್ಯೇಕವಾಗಿ ವಾಸವಿದ್ದಾರೆ ಎಂದು ಸೂಚಿಸಿದರೆ ಸಾಕ್ಷಿ ನನ್ನ ಮತ್ತು 1 ನೇ ಆರೋಪಿ ನಡುವೆ ಜಗಳ ಆದಾಗ 2 ರಿಂದ 6 ನೇ ಆರೋಪಿತರು ಬರುತ್ತಿದ್ದರು ಎನ್ನುತ್ತಾರೆ. ನಾನು ಮತ್ತು ನನ್ನ ಗಂಡ ಮದುವೆಯಾದಗಿನಿಂದ ಅನ್ಯೋನ್ಯವಾಗಿದ್ದು ನನ್ನ ಅತ್ತೆ-ಮಾವ ನನ್ನ ಗಂಡನಿಗೆ ಕೊಡುವ ಜಮೀನಿನ ಮೇಲೆ ಇರುವ ಸರ್ಕಾರಿ ಸಾಲವನ್ನು ತೀರಿಸುವಂತೆ ಹೇಳಿದ್ದರಿಂದ ನಾನು ಸದರಿ ಸಾಲವನ್ನು ನಾವು ತೀರಿಸುವುದಿಲ್ಲ ಎಂದು ಹೇಳಿ ಮದುವೆಯಾದಗಿನಿಂದ ಆರೋಪಿತರ ಬಳಿ ಜಗಳವಾಡುತ್ತ ಬಂದಿದ್ದೇನೆ ಎಂದು ಸೂಚಿಸಿದರೆ ಸಾಕ್ಷಿ ನಾನು ಜಮೀನನ್ನು ಅನುಭವಿಸುತ್ತಿಲ್ಲ ಹಾಗಾಗಿ ಸಾಲ ತೀರಿಸುವುದಿಲ್ಲ ಎಂದು ಹೇಳಿದ್ದೇನೆ ಆದರೆ ಆ ಬಗ್ಗೆ ಜಗಳ ಮಾಡಿಲ್ಲ ಮತ್ತು ಆರೋಪಿತರೇ ನನಗೆ ಹೊಡೆದು-ಬಡೆದು ಕೊಲೆ ಮಾಡುತ್ತೇವೆ ಎಂದು ಬೆದರಿಸುತ್ತಾರೆ ಎನ್ನುತ್ತಾರೆ. ನಿಮ್ಮ ಗಂಡನ ಸಹೋದರರಾದ 4 ಮತ್ತು 5 ನೇ ಆರೋಪಿತರು ಅವರ ಪಾಲಿಗೆ ಬಂದ ಜಮೀನನ್ನು ಅವರವರೇ ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ನನ್ನ ಗಂಡನಿಗೆ ಬಂದಿರುವ ಜಮೀನನ್ನು 4 ಮತ್ತು 5 ನೇ ಆರೋಪಿತರೆ ಉಳುಮೆ ಮಾಡುತ್ತಿದ್ದಾರೆ ಎನ್ನುತ್ತಾರೆ. ನನ್ನ ಗಂಡ 1 ನೇ ಆರೋಪಿ ಈಗ ಯಾರ ಬಳಿ ಇದ್ದಾನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ 2 ಮತ್ತು 3 ನೇ ಆರೋಪಿತರ ಜೊತೆ ಇದ್ದಾನೆ ಎನ್ನುತ್ತಾರೆ. 2 ಮತ್ತು 3 ನೇ ಆರೋಪಿತರ ಜೊತೆ ನನ್ನ ಗಂಡ ವಾಸವಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಮತ್ತು 1, 4 ಮತ್ತು 5 ನೇ ಆರೋಪಿತರು 2 ಮತ್ತು 3 ನೇ ಆರೋಪಿತರಿಂದ ತುಂಬಾ ವರ್ಷಗಳ ಹಿಂದೆಯೇ ಬೇರೆಯಾಗಿದ್ದಾರೆ ಎನ್ನುತ್ತಾರೆ.

1 ನೇ ಆರೋಪಿ ಇತ್ತಿಚಿಗೆ ನಿಮ್ಮ ಬಳಿ ಯಾವಾಗ ಬಂದಿದ್ದ ಎಂಬ ಪ್ರಶ್ನೆಗೆ ಸಾಕ್ಷಿ ಜನವರಿ-1 ನೇ ತಾರಿಖು ಬಂದಿದ್ದ ಎನ್ನುತ್ತಾರೆ. 2 ರಿಂದ 6 ನೇ ಆರೋಪಿತರು ನನ್ನ ಮತ್ತು ನನ್ನ ಗಂಡನ ತಂಟೆಗೆ

ಯಾವತ್ತು ಬಂದಿಲ್ಲ ಮತ್ತು ಸದರಿಯವರು ನಮ್ಮ ಊರಿಗೂ ಯಾವತ್ತು ಬಂದಿಲ್ಲ ಎನ್ನುವುದು ಸರಿಯಲ್ಲ. 2 ರಿಂದ 6 ನೇ ಆರೋಪಿತರು ನಮ್ಮ ಊರಿಗೆ ಬಂದು ಯಾವತ್ತು ಜಗಳವಾಡಿಲ್ಲ ಮತ್ತು ಅವರಿಗೆ ನನ್ನ ಮತ್ತು 1 ನೇ ಆರೋಪಿ ನಡುವಿನ ಯಾವುದೇ ವಿಚಾರ ಅವರಿಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಮತ್ತು ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದಾಗ ನಾನು ಹೇಳಿರುವ ರೀತಿಯ ಯಾವುದೇ ಘಟನೆ ನಡೆದಿಲ್ಲ ಮತ್ತು ನಾನು ಹೇಳಿರುವುದು ಎಲ್ಲಾ ಸುಳ್ಳು ಎನ್ನುವುದು ಸರಿಯಲ್ಲ. ನಾನು ಸ್ವತಃ ಜಗಳಗಂಟಿ ಸ್ವಭಾವದವಳಿದ್ದು ಆರೋಪಿತರ ಮೇಲೆ ವಿನಾಃ ಜಗಳ ತೆಗೆದು ಅವರ ವಿರುದ್ಧವೇ ಸುಳ್ಳು ದೂರು ಕೊಟ್ಟು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 2 ರಿಂದ 6 ನೇ ಆರೋಪಿತರು ನನ್ನ ಮತ್ತು 1 ನೇ ಆರೋಪಿ ಮದುವೆ ಆದ ದಿನದಿಂದ ನಮ್ಮ ಊರಿಗೆ ಬಂದಿಲ್ಲ ಮತ್ತು ನಮ್ಮ ತಂಟೆಗೆ ಬಂದಿಲ್ಲ ಹಾಗೂ ಅವರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸತಾಯಿಸುವ ಸಲುವಾಗಿ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**(ಸಾಕ್ಷಿ ತೆಲುಗು ಭಾಷೆಯಲ್ಲಿ ಹೇಳಿದ್ದನ್ನು ಭಾಷಾಂತರಕಾರರು ಹಾಗೂ ವಕೀಲರಾದ ಶ್ರೀಮತಿ ನಾಗವೇಣಿ ಎಸ್. ಕಳಸ್ಕರ ರವರು ಯಥಾವತ್ತಾಗಿ ಕನ್ನಡಕ್ಕೆ ಭಾಷಾಂತರಿಸಿದ್ದನ್ನು ದಾಖಲಿಸಿಕೊಳ್ಳಲಾಗಿದೆ. )**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ _**